ವಾಟರ್ ರಿಸೋರ್ಸ್ ಬಗ್ಗೆ ಇದೆ. ಅದು ಕೆಳಮಟ್ಟಕ್ಕೆ ಹೋಗುತ್ತಿದೆ. ಆದ್ದರಿಂದ ನಾವು ಒಂದೇ ಬೋರ್‌ವೆಲ್‌ಗಳನ್ನು ಅಲ್ಲಿ ಹಾಕುವುದು ಒಂದೇ ಅಲ್ಲ. ನಾವು ಎಲ್ಲಿ ಬೋರ್‌ವೆಲ್‌ನ್ನು ಹಾಕುತ್ತೇವೋ ಅಲ್ಲಿ ವಾಟರ್ ಮ್ಯಾನೇಜ್‌ಮೆಂಟ್, ಅಂದರೆ ನೀರನ್ನು ಸಲ್ಲಿಸತಕ್ಕ ಕ್ರಮವನ್ನು ವ್ಯಾಪಕವಾಗಿ ಮಾಡಬೇಕೆಂದು ನಾನು ಹದೇ ಹದೇ ಹೇಳುತ್ತಿದ್ದೇನೆ. ಇಲ್ಲದಿದ್ದರೆ ನಾವು ಬೋರ್‌ವೆಲ್‌ನ್ನು ಹಾಕಿದರೂ ಕೂಡ ನೀರು ಸಿಗುವುದು ಕಷ್ಟವಾಗುತ್ತದೆ.

ಶ್ರೀ ಎಸ್. ರಮೇಶ್.—ಇಲ್ಲಿ ಕನ್‌ಫ್ಯೂಷನ್ ಆಗಿದೆ. ನಾನು ಗೌರವಾನ್ವಿತ ಸಚಿವರಲ್ಲಿ ಬೋರ್‌ವೆಲ್ ರಿಪೇರಿಯ ಬಗ್ಗೆ ಕೇಳುತ್ತಿಲ್ಲ. ನಾನು ಕೇಳುತ್ತಿರುವುದೇನೆಂದರೆ, ಬೋರ್‌ವೆಲ್‌ನ್ನು ಡಿಗ್ ಮಾಡಿದ್ದಾರೆ. ಆದರೆ ಅಲ್ಲಿಗೆ ಹ್ಯಾಂಡ್ ಪಂಪ್‌ನ್ನು ಹಾಕಿರುವುದಿಲ್ಲ. ಮಿನಿ ವಾಟರ್ ಸ್ಕೀಮ್‌ನ್ನು ಪ್ರಾರಂಭ ಮಾಡಿದ್ದಾರೆ, ಆದರೆ ಒಂದೂವರೆ ವರ್ಷಗಳಾದರೂ ಸಹ ಅದು ಪೂರ್ತಿಗೊಂಡಿಲ್ಲ. ನನ್ನ ಕ್ಷೇತ್ರದಲ್ಲೇ ಇಪ್ಪತ್ತು ಬೋರ್‌ವೆಲ್‌ಗಳನ್ನು ಹಾಕಿದ್ದಾರೆ. ಆದರೆ ಅವುಗಳಿಗೆ ಹ್ಯಾಂಡ್ ಪಂಪ್ ಹಾಕಿಲ್ಲ. ಅಧಿಕಾರಿಗಳನ್ನು ಕೇಳಿದರೆ ಪಂಪುಗಳು ಸ್ಟಾಕ್ ಇಲ್ಲ, ನಮಗೆ ಹಣ ಸಿಕ್ಕಿಲ್ಲ, ಹಣವನ್ನು ಕೊಡುವವರೆಗೆ ಸಪ್ಲೆಯರ್‌ಗಳು ಪಂಪನ್ನು ಸಪ್ಲೈ ಮಾಡುವುದಿಲ್ಲ ಎಂಬ ವಾದವನ್ನು ಅಧಿಕಾರಿಗಳು ಮಂಡಿಸುತ್ತಾರೆ. ಇದರ ಬಗ್ಗೆ ತಾವು ಕ್ರಮ ತೆಗೆದುಕೊಳ್ಳುತ್ತೀರ?

ಶ್ರೀ ಎಂ. ವೈ. ಘೋರ್ಪಡೆ.—ದೊಡ್ಡ ಪ್ರಮಾಣದಲ್ಲಿ ಈ ಕಾರ್ಯಕ್ರಮವನ್ನು ಮಾಡುತ್ತಿರುವುದರಿಂದ, ಎಲ್ಲೋ ಒಂದು ಕಡೆ ಅಧಿಕಾರಿಗಳು ಕೆಲಸ ಮಾಡದಿದ್ದರೆ, ಅದನ್ನು ನನ್ನ ಗಮನಕ್ಕೆ ತಂದರೆ ತಕ್ಷಣ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಲು ಸಾಧ್ಯವಾಗುತ್ತದೆ.

ಶ್ರೀಮತಿ ಪುಷ್ಪಾವಸಂತ್.—ಒಂದೊಂದು ಬೋರ್‌ವೆಲ್‌ನ್ನು ತೆಗೆಯಲು ೩೦-೪೦ ಸಾವಿರ ರೂಪಾಯಿಗಳು ಖರ್ಚಾಗುತ್ತದೆ. ಈ ರೀತಿ ತೆಗೆದ ಬೋರ್‌ವೆಲ್‌ಗಳು ವಿಫಲಗೊಂಡರೆ, ತಾವು ತೆರವು ಖಾಲಿಗಳನ್ನು ಮಾಡಲು ಅನುಮತಿ ಕೊಡಬಹುದಲ್ಲವೇ?

ಶ್ರೀ ಎಂ. ವೈ. ಘೋರ್ಪಡೆ.—ತೆರವು ಖಾಲಿಗಳನ್ನು ಮಾಡಲು ತೊಂದರೆಯೇನೂ ಇಲ್ಲ. ನೀರು ಸಿಕ್ಕಿದರೆ ಸಾಕು.

ಅಧ್ಯಕ್ಷರು.—ಸಾದತ್ ಅಲಿ ಖಾನ್‌ರವರೇ, ತಮ್ಮ ಪ್ರಶ್ನೆಯು ಪಿ.ಡಬ್ಲ್ಯೂ.ಡಿ. ಇಲಾಖೆಗೆ ವರ್ಗವಾಗಿರುತ್ತದೆ.

ಶ್ರೀ ಸಾದತ್ ಅಲಿ ಖಾನ್.—ಸನ್ಮಾನ್ಯ ಅಧ್ಯಕ್ಷರೇ, ಹೋದಸಲದ ಅಧಿವೇಶನದಲ್ಲಿ ಈ ಪ್ರಶ್ನೆಯನ್ನು ಪಿ.ಡಬ್ಲ್ಯೂ.ಡಿ. ಇಲಾಖೆಯವರಿಗೆ ಹಾಕಿದ್ದೆ. ಆಗ ಪಿ.ಡಬ್ಲ್ಯೂ.ಡಿ. ಇಲಾಖೆಯ ಪರವಾಗಿ ಇಂದು ಜಿಲ್ಲಾಪರಿಷತ್‌ಗೆ ಬರುತ್ತದೆಂದು ಹೇಳಿದ್ದರು. ಜಿಲ್ಲಾ ಪರಿಷತ್‌ನವರನ್ನು ಕೇಳಿದರೆ ಪಿ.ಡಬ್ಲ್ಯೂ.ಡಿ.ಗೆ ಬರುತ್ತದೆಂದು ಹೇಳುತ್ತಾರೆ. ಹಾಗಾದರೆ ಇದು ಬೇರೆ ಮಾತ್ರುವುದಾದರೂ ವಿಜೆನ್ಸಿಗೆ ಬರುತ್ತದೆಯೇ? ಪಿ.ಡಬ್ಲ್ಯೂ.ಡಿ. ರೋಡೂ ಇಲ್ಲ, ಜಿಲ್ಲಾ ಪರಿಷತ್ ರೋಡೂ ಇಲ್ಲ.

ಅಧ್ಯಕ್ಷರು.—ನನಗೆ ಅದರ ಬಗ್ಗೆ ಕಳುಹಿಸಿಕೊಡಿ, ತದನಂತರ ತಮಗೆ ತಿಳಿಸುತ್ತೇನೆ.

ಧಾರವಾಡ ಜಿಲ್ಲಾ ಪರಿಷತ್ತಿನಿಂದ ಡಿ.ಪಿ.ಎ.ಪಿ. ಯೋಜನೆ

೩೦೨ (೬೨೧) ಶ್ರೀ ಮಂಜುನಾಥ ಸಿ. ಕಾಂಗ್ರೆಸ್ಸಿ (ಶಿಗ್ಗಾಂವ).—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಧಾರವಾಡ ಜಿಲ್ಲಾ ಪರಿಷತ್ತಿನಿಂದ ಡಿ.ಪಿ.ಎ.ಪಿ. ಯೋಜನೆಯಲ್ಲಿ ಎಷ್ಟು ಹಣ ಖರ್ಚು ಮಾಡಲಾಗಿದೆ ಹಾಗೂ ೧೯೯೬-೯೭ನೇ ಸಾಲಿನಲ್ಲಿ ಎಷ್ಟು ಹಣ ಒದಗಿಸಲಾಗಿದೆ ?

ಆ) ಶಿಗ್ಗಾಂವ ಮತ್ತು ಸವಣೂರ ತಾಲ್ಲೂಕುಗಳಲ್ಲಿ ಡಿಪಿಎಪಿ ಯೋಜನೆಯಲ್ಲಿ ತೆಗೆದುಕೊಂಡ ಕೆಲಸಗಳಾವುವು ?

ಇ) ಅದಕ್ಕೆ ಎಷ್ಟು ಹಣ ಖರ್ಚು ಮಾಡಲಾಗಿದೆ ಹಾಗೂ ಅವು ಯಾವ ಹಂತದಲ್ಲಿದೆ ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು).—

ಅ) ಡಿಪಿಎಪಿ ಯೋಜನೆಯಲ್ಲಿ ೧೯೯೩-೯೪ನೇ ಸಾಲಿಗೆ ಒಟ್ಟು ಮಂಜೂರಾದ ಹಣ ರೂ. ೩೦೫.೨೫೩ ಲಕ್ಷಗಳು ಹಾಗೂ ಈ ಹಣದಲ್ಲಿ ಫೆಬ್ರುವರಿ ೧೯೯೪ರ ಅಂತ್ಯದವರೆಗೆ ಖರ್ಚು ಮಾಡಿದ ಹಣ ರೂ. ೧೫೦.೨೩೫ ಲಕ್ಷಗಳು,

ಆ) ಮತ್ತು ಇ) ಶಿಗ್ಗಾಂವ ಮತ್ತು ಸವಣೂರ ತಾಲ್ಲೂಕುಗಳಲ್ಲಿ ಡಿಪಿಎಪಿ ಯೋಜನೆಯಡಿಯಲ್ಲಿ ತೆಗೆದುಕೊಂಡ ಕೆಲಸಗಳು, ಅದಕ್ಕೆ ಖರ್ಚು ಮಾಡಿದ ಹಣ ಹಾಗೂ ಅವು ಯಾವ ಹಂತದಲ್ಲಿದೆ ಎಂಬ ಬಗ್ಗೆ ವಿವರಗಳನ್ನು ತಿಳಿಸುವ ತಖ್ತೆಗಳನ್ನು ಲಗತ್ತಿಸಿದೆ

ANNEXURE

Works under taken in Shiggaon & Savanur Taluka during 1993-94 under D.P.A.P.

Social Forestry Department :

Sl.No.	Name of work	Shiggaon	Savanur
1.	Raising of Plantations.	70 Ha	15 Ha
2.	Maintenance of one and two year old plantations.	73.5 Ha	55 Ha
3.	Maintenance of seedlings raised during 1992-93.	0 935 Lakh	0.30 Lakh
4.	Raising of seedlings for plating during 94 rains.	0.65 Lakh	0.30 Lakh
5.	Advance works done during 93-94 for planting during 94 rains.	40 Ha	5 Ha

Animal Husbandry Department : In Both the Talukas the fodder develoipment is under taken. For this purpose Fodder seeds and fertilizers are being distributed in 1 acre of farmers field for feeding their cattle with green fodder. Details are as under :—

		Shiggaon	Savanur
1.	South African tall maize seeds.	32.04 Qntl	32.04 Qntl
2.	Cowpea seeds.	3.56 Qntl	3.56 Qntl
3.	Fertilizer 1 Qntl. for each benf (178 Benf)	178 Qntl	178 Qntl

Fisheries Department : In Savanur Taluka 1.00 lakh fish seeds worth Rs. 0.10 & In Shiggaon Taluka 1.00 lakh fish seeds worth Rs. 0.10 were distributed to Mandal Panchayats/Fisheries Co-op. Societies/Individual Fish farmers.

Agricultur e(Social conservation): The following works were executed.

	Shiggaon	Savanur
1. Conterbunding	Rs. 406000/-	Rs. 14296/-
2. Check Dams	—	Rs. 196804/-

Sericulture Department ; In Savanur and Shiggaon the Sapplings were distributed.

1) Shiggaon. 1.25 Sapplings.
2) Savanur 0.80 Sapplings.

Z.P. Engineering Division : The following works are executed in Shiggaon and Savanur Taluks.

1. Construction of Percollation Check-Dams 4 works.
2. Construction of Check dams (Spill over works) 8 works.

Horticulture Department : The following works are executed-

	Shiggaon	Savanur
1. Distribution of planting material on 75% subsidy.	11.00 Hect.	11.00 Hect.
2. Orchard Horticulture in selected beneficiaries.	5.0	50.

The following amount has been spent during 93-94 and works are near to comp.

1. Shiggaon. Rs. 3.332 lakhs.
2 Savanur. Rs. 2.310 lakhs.

Note ; No sufficient area is available in the approved water-sheds. If some area available, there is people agitation noticed.

Animal Husbandry Dept. : The following amount has been spent during 93–94 and works are in progress.

1.	Shiggaon	Rs. 96.843–00
2,	Savanur	Rs. 95.143–00

Fisheries Department : Physical progress in Savanur & Shiggaon taluka have been achieved. Bills pending at try. and got encashed before 31st March 1994.

Agriculture Department Soil Conservation) : The details of amount spent for Soil conservation works in

		Shiggaon	Savanur
1.	Conter bunding	Rs. 4,96,000/–	14,296/–
2.	Check Dams	—	1,96,804/–

These works are almost completed.

Serculture Department : The achievements at the end of eb. 94 is as follow :

		Shiggaon	Savanur
1.	Physical	1.75 Sapplings	1.25
2.	Financial	0.299 Lakhs	0.198

Note :—These sapplings were distributed ia Savanur Taluka, where as the Sapplings pertainingtoShiggaon Tal. are yet to be distributed in March 1994.

Z.P. Engineering Division : For the above works–4, upto Feb-94 Rs. 4.110 lakhs spent Rs. 6.00 lakhs provided–2 works are completed and 2 under progress for spill over and fresh works.

For the above 8 works–Rs. 3.30 lakhs spent.–Works will be completed according to the availability of funds. D.P.A.P. works coming under Savanur Taluka have been furnished Works will be completed according to the availability of funds

Horticulture Department : An amount of Rs. 24.092/-has been booked in Shiggaon and an amount of Rs. 24,900/–has been booked in Savanur Talukas towards distribution of planing materials at the rate of 75% subsidy.

ಶ್ರೀ ಮಂಜುನಾಥ ಸಿ. ಕುನ್ನೂರು.—ಸನ್ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ೧೯೯೩-೯೪ನೇ ಸಾಲಿನಲ್ಲಿ ಡಿಪಿಎಪಿ ಯೋಜನೆಯ ಅಡಿಯಲ್ಲಿ ಧಾರವಾಡ ಜಿಲ್ಲಾಪರಿಷತ್‌ಗೆ ಮಂಜೂರಾದ ಹಣ ೩೦೫.೨೫೩ ಲಕ್ಷ ರೂಪಾಯಿಗಳು, ಹಾಗೂ ಈ ಹಣದಲ್ಲಿ ಫೆಬ್ರುವರಿ ೧೯೯೪ರ ಅಂತ್ಯದವರೆಗೆ ಖರ್ಚು ಮಾಡಿರುವ ಹಣ ರೂ. ೧೫೦.೨೫೫ ಲಕ್ಷ ಎಂದು ತಿಳಿಸಿದ್ದಾರೆ. ಮಂಜೂರಾಗಿರುವ ಹಣದಲ್ಲಿ ಅರ್ಧದಷ್ಟನ್ನೂ ಸಹ ಖರ್ಚು ಮಾಡದಿರುವುದು ಕಂಡುಬರುತ್ತದೆ. ಫೆಬ್ರುವರಿ ಕೊನೆಯವರೆಗೆ ಖರ್ಚು ಮಾಡಿರುವ ಹಣ ೧೫೦.೨೫೫ ಲಕ್ಷ ರೂಪಾಯಿಗಳು. ಮಾರ್ಚ್ ತಿಂಗಳಿನಲ್ಲಿ ಕೆಲಸ ಈಗಾಗಲೇ ಮುಗಿಯುತ್ತಾ ಬಂದಿದೆ. ಸಾಕಷ್ಟು ಹಣವನ್ನು ಡಿಪಿಎಪಿ ಯೋಜನೆಯಲ್ಲಿ ನಿಗದಿ ಮಾಡಿದ್ದರೂ ಕೂಡ ಧಾರವಾಡ ಜಿಲ್ಲೆಯಲ್ಲಿ ಹಣವನ್ನು ಖರ್ಚು ಮಾಡದೇ ಇರತಕ್ಕದ್ದು ವಿಷಾದನೀಯ ಎನ್ನುತಕ್ಕ ಮಾತನ್ನು ಹೇಳಬಯಸುತ್ತೇನೆ. ಇನ್ನು ಶಿಗ್ಗಾಂವ ಮತ್ತು ಸವಣೂರು ತಾಲ್ಲೂಕುಗಳಲ್ಲಿ ಈ ಯೋಜನೆಯಲ್ಲಿ ಕೆಲಸವನ್ನು ಮಾಡಿದಂಥದ್ದರ ಬಗ್ಗೆ ಈಗಾಗಲೇ ಅನೆಕ್ಷೆರ್‌ನ್ನು ಇದರ ಜೊತೆಯಲ್ಲಿ ಕೊಟ್ಟಿದ್ದಾರೆ. ಇದರಲ್ಲಿ No sufficient area is available in the approved watersheds. If some area is available, there is people agitation noticed ಎಂದು ಹೇಳಿದ್ದಾರೆ. ಸಾರ್ವಜನಿಕರು ಮಂಜೂರಾದಂಥ ವಾಟರ್ ಶೆಡ್ ಏರಿಯಾವಲ್ಲಿ ಎಜಿಟೇಷನ್ ಮಾಡಿದ್ದಾರೆ ಎನ್ನುತಕ್ಕ ಮಾತನ್ನು ಹೇಳಿದ್ದಾರೆ. ಈದು ಸತ್ಯಕ್ಕೆ ದೂರದವಾದ ಮಾತು ಎನ್ನುತಕ್ಕದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಆ ಕಾರಣ ಇವತ್ತು ಅಲ್ಲಿ ಖರ್ಚು ಮಾಡಿದಂಥ ಹಣ ಬಹಳ ಕಡಿಮೆ ಇದ್ದು, ಏಕೆ ಈ ರೀತಿಯಾದ ವ್ಯವಸ್ಥೆಯಾಗಿದೆ ಎನ್ನುವುದನ್ನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಅಧ್ಯಕ್ಷರೆ, ಡ್ರಾಟ್ ಜೋನ್ ಏರಿಯಾದಲ್ಲಿ ೭೧ ತಾಲ್ಲೂಕುಗಳಲ್ಲಿ ಡಿಪಿಎಪಿ ಕಾರ್ಯಕ್ರಮ ನಡೆಯುತ್ತಿದೆ. ತಮ್ಮ ತಾಲ್ಲೂಕಿನಲ್ಲಿ ಈ ಯೋಜನೆಯ ಅಡಿಯಲ್ಲಿ ಖರ್ಚು ಮಾಡಿರುವ ಹಣದ ಬಗ್ಗೆ ವಿವರವಾದ ಮಾಹಿತಿಯನ್ನು ಕೊಟ್ಟಿದ್ದೇವೆ. ಒಟ್ಟು ೩೫೦ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದರೆ, ಅದರಲ್ಲಿ ಪೂರ್ಣವಾಗಿ ಹಣವನ್ನು ಖರ್ಚು ಮಾಡದೆ ೧೫೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಶಿಗ್ಗಾಂವ್ ಮತ್ತು ಸವಣೂರು ತಾಲ್ಲೂಕುಗಳಲ್ಲಿ ಯಾವ ಯಾವ ಕೆಲಸಕ್ಕೆ ಎಷ್ಟೆಷ್ಟು ಖರ್ಚು ಮಾಡಿದ್ದಾರೆ, ಅದರ ಸಂಪೂರ್ಣವಾದಂತಹ ವಿವರಗಳು ನನ್ನ ಕಡೆ ಇದೆ. ಅವನ್ನು ತಮಗೆ ಕೊಡುತ್ತೇನೆ. ಸಂಕ್ಷಿಪ್ತವಾಗಿ ಹೇಳುವುದಾದರೆ ೩೫೦ ಕೋಟಿ ರೂಪಾಯಿಗಳಲ್ಲಿ Rs. 104 lakhs for land development, Rs. 69 lakhs for forestry, water source development Rs. 46 lakhs, Horticulture Rs.15 lakhs, Sericulture Rs.3 lakhs, Animal Husbandry Rs.15 lakhs fisheries Rs.1 lakh Project Administration Rs 31 lakhs. ಈ ರೀತಿಯಾಗಿದೆ. ಶಿಗ್ಗಾಂವ್ ಮತ್ತು ಸವಣೂರ್ ತಾಲ್ಲೂಕುಗಳಲ್ಲಿ ಯಾವ ಯಾವ ಭಾಗಗಳಲ್ಲಿ ಕೆಲಸ ಮಾಡುತ್ತಿದೆ ಅಥವಾ ಮಾಡಿಲ್ಲ ಎಂಬುದನ್ನು ತಮಗೆ ಕೊಡುತ್ತೇನೆ. ಇದರಲ್ಲಿ ಇನ್ನು ಏನಾದರೂ ಮಾಡುವುದಕ್ಕೆ ಸಾಧ್ಯವೇ ಎಂದು ಹೇಳಿ, ಸ್ಪೆಸಿಫಿಕ್ ಸಜೆಷನ್ಸ್ ಇದ್ದರೆ ಅದನ್ನ ತಕ್ಷಣ ಆದೇಶ ಕೊಟ್ಟು ಮಾಡಿಸುವುದರಲ್ಲಿ ತೊಂದರೆಯಾಗುವುದಿಲ್ಲ. ಏಕೆಂದರೆ ಹಣದ ಅಭಾವ ಇಲ್ಲ. ಕೊಟ್ಟಿರುವಂತಹ ಹಣ ಸಂಪೂರ್ಣವಾಗಿ ಖರ್ಚು ಮಾಡಲಿಲ್ಲವೆಂದು ನಾವು ಒಪ್ಪಿಕೊಂಡಿದ್ದೇವೆ. ಅವರು ಸಂಪೂರ್ಣವಾದಂತಹ ವಿವರಗಳನ್ನೂ ಕೂಡ ಕಳುಹಿಸಿದ್ದಾರೆ. ಇದರ ಬಗ್ಗೆ any suggestion from the Member, I will direct the officers concerned.

ಅಧ್ಯಕ್ಷರು.—ಆಯಿತಲ್ಲಾ ಅವರು ಸಲಹೆ ಕೊಡಿ ಮಾಡುತ್ತೇವೆಂದು ಹೇಳಿದರಲ್ಲಾ...

ಶ್ರೀ ಮಂಜುನಾಥ ಸಿ ಕುನ್ನೂರು.—ಈಗ ವಾಟರ್ ಶೆಡ್ ಏರಿಯಾದಲ್ಲಿ ಈ ಕೆಲಸಗಳನ್ನು ಅಭಿವೃದ್ಧಿ ಗೊಳಿಸುವುದಕ್ಕೆ ಏರಿಯಾ ಸಫಿಷೆಯೆಂಟ್ ಸಿಗುತ್ತಿಲ್ಲ ಎನ್ನುವಂತ ಮಾತನ್ನು ಹೇಳಿದ್ದಾರೆ. ಆ ಕಾರಣ ಬೇರೆ ವಾಟರ್ ಷೆಡ್‌ಗಳನ್ನು ಅಪ್ರೂವಲ್ ಮಾಡುವುದಕ್ಕೆ ಒಂದು ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಶಿಗ್ಗಾಂವ್ ಮತ್ತು ಸವಣೂರನಲ್ಲಿ ಈ ಯೋಜನೆಯಡಿಯಲ್ಲಿ ಕೊಟ್ಟಿರುವಂತಹ ಹಣದಲ್ಲಿ ಕೆಲಸ ಮಾಡುತ್ತಿದ್ದಾರೆ. ಇದೀ ಧಾರವಾಡ ಜಿಲ್ಲೆಯಲ್ಲಿ ಇವರು ಒದಗಿಸಿದಂತಹ ಹಣದಲ್ಲಿ ಅರ್ಧದಷ್ಟು ಖರ್ಚಾಗದೇ ಉಳಿದಿರುವುದರಿಂದ ಶಿಗ್ಗಾಂವ್ ಮತ್ತು ಸವಣೂರು ತಾಲ್ಲೂಕುಗಳಿಗೆ ಹೆಚ್ಚಿನ ಹಣವನ್ನು ಒದಗಿಸಿ ಹೆಚ್ಚಿನ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮುಖೇನ ಪೌರ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ.—ಎಷ್ಟು ಹಣ ಖರ್ಚು ಆಗಿದೆ, ಅದರ ಫಿಗರ್ ಕೊಟಿದ್ದೇವೆ, ಇನ್ನು ಮಾರ್ಚಿನಲ್ಲಿ ಖರ್ಚಾಗುವುದಿದೆ. ಮತ್ತೆ ಇನ್ನು ಏನಾದರೂ ಉಳಿತಾಯವಾಗುವುದಾದರೆ ಇಲ್ಲಿ ಅವಶ್ಯಕತೆ ಹೆಚ್ಚಿಗೆ ಇದ್ದರೆ, ಆ ರೀತಿ ಮಾಡುವುದಕ್ಕೆ ಏನು ಸಾಧ್ಯ ಅದನ್ನು ನಾನು ಮಾಡಲು ನಾನು ಹೇಳುತ್ತೇನೆ.

ಅಧ್ಯಕ್ಷರು. ಶ್ರೀ ರಾಜುಗೌಡರವರೇ, ತಮ್ಮ ಪ್ರಶ್ನೆಗೆ ೩೦೩ (೭೬೩) ಮಾನ್ಯ ಮುಖ್ಯ ಮಂತ್ರಿಗಳು ಕಾಲಾವಕಾಶವನ್ನು ಕೇಳಿದ್ದಾರೆ.

ಶಿಕಾರಿಪುರ ತಾಲ್ಲೂಕ್ ಕೊಟ್ರಳ್ಳಿ ಬೀಜೋತ್ಪಾದನಾ ಕೇಂದ್ರ

೩೦೬ (೪೬೧) ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿ ಪುರ).—ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ;—

ಅ) ಶಿಕಾರಿಪುರ ತಾಲ್ಲೂಕು ಕೊಟ್ರಳ್ಳಿ ಬೀಜೋತ್ಪಾದನಾ ಕೇಂದ್ರ ಕಳೆದ ೩ ವರ್ಷಗಳಿಂದ ಮಾಡಿದ ಪ್ರಗತಿ ಏನು ?

ಆ) ತಾಲ್ಲೂಕಿನ ರೈತರಿಗೆ ಈ ಕೇಂದ್ರದಿಂದ ಯಾವ ರೀತಿ ಸಹಾಯವಾಗುತ್ತಿದೆ ?

ಇ) ಅಲ್ಲಿರುವ ಕಟ್ಟಡಗಳು ಬಿದ್ದಿರುವುದು ನಿಜವೇ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಕೃಷಿ ಸಚಿವರು). —

ಅ) ಕೊಟ್ರಹಳ್ಳಿ ಬೀಜೋತ್ಪಾದನಾ ಕೇಂದ್ರದಲ್ಲಿ ಮುಖ್ಯವಾಗಿ ವಿವಿಧ ಕೃಷಿ ಬೆಳೆಗಳ ಮೂಲತಃ ಪ್ರಮಾಣಿತ ಬೀಜೋತ್ಪಾದನೆ ತೆಗೆದುಕೊಳ್ಳಲಾಗುತ್ತಿದೆ. ಕಳೆದ ಮೂರು ವರ್ಷಗಳ ಪ್ರಗತಿ ಕೆಳಕಂಡಂತಿವೆ.

ವರ್ಷ	ಬಿತ್ತನೆಯಾದ ಕ್ಷೇತ್ರ (ಹೆಕ್ಟೇರು)	ಉತ್ಪನ್ನ ಕ್ವಿಂಟಾಲ್ ಗಳಲ್ಲಿ)	ಷರಾ
೧೯೯೦–೯೧	೭.೨೦	೧೧೨.೩೧	---
೧೯೯೧–೯೨	೮.೦೦	೩೮.೨೫	ಅತಿ ಮಳೆಯಿಂದಾಗಿ ಬೆಳೆ ಹಾನಿಯಾಗಿದ್ದು ಇಳುವರಿ ಕಡಿಮೆ ಇದೆ.
೧೯೯೨–೯೩	೪.೮೦	---	ಅತಿವೃಷ್ಟಿಯಿಂದಾಗಿ ಯಾವುದೇ ರೀತಿಯ ಉತ್ಪನ್ನ ಬಂದಿಲ್ಲ.

ಆ) ಸದರಿ ಕೇಂದ್ರದಲ್ಲಿ ಉತ್ಪಾದಿಸಿದ ಮೂಲತ ಪ್ರಮಾಣಿತ ಬಿತ್ತನೆ ಬೀಜಗಳನ್ನು ಕರ್ನಾಟಕ ರಾಜ್ಯ ಬೀಜ ನಿಗಮಕ್ಕೆ ಮರು ಉತ್ಪಾದನೆಗಾಗಿ ಪಹಿಣ ಕೊಡಲಾಗುತ್ತಿದೆ. ಹೀಗೆ ಬೀಜ ನಿಗಮದಿಂದ ಉತ್ಪಾದಿಸಿದ ಬಿತ್ತನೆ ಬೀಜಗಳನ್ನು ರೈತರಿಗೆ ವಿತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಸದರಿ ಕೇಂದ್ರದಲ್ಲಿನ ವಿವಿಧ ಕಟ್ಟಡಗಳ ಪೈಕಿ ಉಗ್ರಾಣ ಮೇಲ್ಛಾವಣಿ ಮಾತ್ರ ಬಿದ್ದು ಹೋಗಿರುತ್ತದೆ. ದುರಸ್ತಿಗಾಗಿ ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ. ಶಿಕಾರಿಪುರ ಕೊಟ್ರಹಳ್ಳಿಯಲ್ಲಿ ಬೀಜೋತ್ಪಾದನಾಕೇಂದ್ರಗಳು ಇವೆ. ಅಲ್ಲಿಏನು ಉತ್ಪಾದನಾಮಾಡುತ್ತಿದ್ದಾರೆಂದು ಕೇಳಿದ್ದೇನೆ. ಕಳೆದ ಮೂರು ವರ್ಷಗಳಿಂದ ಅಂದರೆ ೧೯೯೩–೯೪ಕ್ಕೂ ಸೇರಬೇಕಾಗುತ್ತದೆ. ಆದರೆ ಅದನ್ನು ತಾವು ಹೇಳಿಲ್ಲ. ೧೯೯೦–೯೧ರಲ್ಲಿ ೭.೨೦ ಹೆಕ್ಟೇರುನಲ್ಲಿ ೧೧೨ ಕ್ವಿಂಟಾಲ್ ೩೧ ಕೆ. ಜಿ. ಮತ್ತು ೧೯೯೧–೯೨ರಲ್ಲಿ ೮ ಹೆಕ್ಟೇರ್‌ನಲ್ಲಿ ೩೮ ಕ್ವಿಂಟಾಲ್ ೨೫ ಕೆ. ಜಿ. ಉತ್ಪನ್ನ ಮಾಡಿದ್ದೇವೆಂದು ಹೇಳಿದ್ದೀರಿ. ೧೯೯೨–೯೩ರಲ್ಲಿ ಏನೂ ಉತ್ಪಾದನೆಯಾಗಿಲ್ಲ; ೧೯೯೩–೯೪ರಲ್ಲಿ ನನಗೆ ಗೊತ್ತಿದೆ. ಏನೂ ಮಾಡಿಲ್ಲ ಅಲ್ಲಿ. ರಾಜ್ಯದಲ್ಲಿ ಈ ರೀತಿ ಬೀಜೋತ್ಪಾದನಾ ಕೇಂದ್ರಗಳು ಒಟ್ಟು ಎಷ್ಟು ಇವೆ. ರೈತರಿಗೆ ಬೇಕಾದಂತಹ ಈ ರೀತಿ ಪ್ರಮಾಣಿಕ ಬಿತ್ತನೆ ಬೀಜ